■ ಶಶಿಕುಮಾರ್ ಸಿ.

# ವಾಟ್ಸ್‌ಆ್ಯಪ್: ಕ್ವಿಟ್ ಇಂಡಿಯಾ?



ಚಿತ್ರ: ವಾಟ್ಸ್‌ಆ್ಯಪ್ ಕೃಪೆ

ದೇಶದ ಐಟಿ ನಿಯಮಗಳಿಗೆ ವಿರುದ್ಧವಾಗಿ ನಡೆದುಕೊಂಡು ಕೇಂದ್ರ ಸರ್ಕಾರದ ಕೆಂಗಣ್ಣಿಗೆ ವಾಟ್ಸ್‌ಆ್ಯಪ್ ತುತ್ತಾಗಿದ್ದು, ಕಟ್ಟುನಿಟ್ಟಿನ ನಿಯಮ ಪಾಲನೆಗೆ ಒತ್ತಡ ಎದುರಾದರೆ ದೇಶವನ್ನೇ ತೊರೆಯುವುದಾಗಿ ದೆಹಲಿ ಹೈಕೋರ್ಟ್‌ಗೆ ತಿಳಿಸಿದೆ.

ಐಟಿ ನಿಯಮಗಳು 2021ರ ಕಾಯ್ದೆಯನ್ವಯ ಸೆಕ್ಷನ್ 4(2)ಗೆ ಸಂಬಂಧಿಸಿದಂತೆ ಕೋರ್ಟ್‌ನಲ್ಲಿ ವಾಟ್ಸ್‌ಆ್ಯಪ್ ಹಾಗೂ ಕೇಂದ್ರ ಸರ್ಕಾರದ ನಡುವೆ ವ್ಯಾಜ್ಯ ನಡೆಯುತ್ತಿದೆ. ಕೇಂದ್ರ ಸರ್ಕಾರ ಕೇಳಿದಾಗ ವಾಟ್ಸ್‌ಆ್ಯಪ್ ವೇದಿಕೆಯು ತನ್ನ ಆ್ಯಪ್‌ನಲ್ಲಿ ರವಾನಿಸಿದ ಅಥವಾ ಸ್ವೀಕರಿಸಿದ ನಿರ್ದಿಷ್ಟ ಸಂದೇಶದ ಮೂಲವನ್ನು ಬಹಿರಂಗಪಡಿಸಬೇಕು ಎಂಬುದು ನಿಯಮ.

‘ಆದರೆ, ಕೇಂದ್ರ ಸರ್ಕಾರ ಕೇಳಿದಾಗ ನಿರ್ದಿಷ್ಟ ಸಂದೇಶದ ಮೂಲ ಬಹಿರಂಗಪಡಿಸಲು ಕಂಪನಿಯು ತನ್ನ ‘ಎಂಡ್ ಟು ಎಂಡ್ ಎನ್‌ಕ್ರಿಪ್ಷನ್’ ತೆಗೆದುಹಾಕಬೇಕಾಗುತ್ತದೆ. ಇದು ಕಂಪನಿಯು ಬಳಕೆದಾರರಿಗೆ ಒದಗಿಸುವ ಗೋಪ್ಯತೆಯ ಹಕ್ಕಿಗೆ ಧಕ್ಕೆಯುಂಟು ಮಾಡುತ್ತದೆ. ಇದು ಸಾಧ್ಯವಿಲ್ಲ’ ಎನ್ನುವ ವಿಚಾರವಾಗಿ ಕೋರ್ಟ್‌ನಲ್ಲಿ ವಾಟ್ಸ್‌ಆ್ಯಪ್ ಕೇಸು ದಾಖಲಿಸಿದೆ.

### ಏನಿದು ‘ಇ2ಇಇ’?

ಎಂಡ್ ಟು ಎಂಡ್ ಎನ್‌ಕ್ರಿಪ್ಷನ್ (ಇ2ಇಇ) ಎಂಬುದು ಮೆಟಾ ಒಡೆತನದ ವಾಟ್ಸ್‌ಆ್ಯಪ್ ತನ್ನ ಬಳಕೆದಾರರಿಗೆ ಒದಗಿಸುತ್ತಿರುವ ಒಂದು ಖಾಸಗಿ ಸಂವಹನ ವ್ಯವಸ್ಥೆ. ಅಂದರೆ, ವಾಟ್ಸ್‌ಆ್ಯಪ್‌ನಲ್ಲಿ ಕಳುಹಿಸಿದ ಸಂದೇಶ, ಫೋಟೊ, ವಿಡಿಯೊ ಅಥವಾ ಕರೆಯನ್ನು ಬಳಕೆದಾರ ಮತ್ತು ಆತ ಯಾರಿಗೆ ಕಳುಹಿಸುತ್ತಾನೆಯೋ ಅವರು ಮಾತ್ರ ನೋಡಲು ಸಾಧ್ಯವಿರುವಂತಹ ವ್ಯವಸ್ಥೆ. ಇದರಲ್ಲಿ ವಾಟ್ಸ್‌ಆ್ಯಪ್ ಸೇರಿದಂತೆ ಬೇರೆ ಯಾರೂ ಇಣುಕಲು ಸಾಧ್ಯವಿಲ್ಲ.

ಇದು ಡಿಜಿಟಲ್ ಲೋಕದಲ್ಲಿ ವಾಟ್ಸ್‌ಆ್ಯಪ್ ತನ್ನ ಬಳಕೆದಾರರಿಗೆ ಕಲ್ಪಿಸಿರುವಂತಹ ಖಾಸಗೀತನ ಕಾಪಾಡುವ ಫೀಚರ್. ಇದನ್ನು ಕಂಪನಿಯು ಬಳಕೆದಾರರಿಗೆ ತಾನು ಒದಗಿಸುತ್ತಿರುವ ಖಾಸಗೀತನದ ಭದ್ರತಾ ಹಕ್ಕೆಂದೇ ಪರಿಗಣಿಸಿದೆ. ಈ ಹಕ್ಕನ್ನು ಭೇದಿಸಿ, ಸಂದೇಶದ ಮೂಲವನ್ನು ಕೇಂದ್ರ ಸರ್ಕಾರ ಕೇಳಿದಾಗ ಒದಗಿಸಬೇಕು ಎಂಬ ನಿಯಮಕ್ಕೆ ವಾಟ್ಸ್‌ಆ್ಯಪ್ ಆಕ್ಷೇಪ ವ್ಯಕ್ತಪಡಿಸುತ್ತಿದೆ.

ಸುಳ್ಳು, ಕುಚೋದ್ಯದಿಂದ ಕೂಡಿದ ವೈರಲ್ ಸುದ್ದಿಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಹಾಗೂ ಇಂತಹ ಸುದ್ದಿಗಳನ್ನು ಹರಡುವ ವ್ಯಕ್ತಿಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮಕೈಗೊಳ್ಳಲು ಕೇಂದ್ರ ಸರ್ಕಾರವು ನಿಯಮದಡಿ ಈ ಮಾಹಿತಿ ಕೋರುತ್ತಿದೆ. ಇದಕ್ಕೆ ಪ್ರತಿಯಾಗಿ ವೈರಲ್ ಸುದ್ದಿಗೆ ಸಂಬಂಧಿಸಿದಂತೆ ಈಗಾಗಲೇ ಅಗತ್ಯ ಕ್ರಮ ಕೈಗೊಂಡಿರುವುದಾಗಿ ವಾಟ್ಸ್‌ಆ್ಯಪ್ ನ್ಯಾಯಾಲಯಕ್ಕೆ ತಿಳಿಸಿದ್ದು, ಬಳಕೆದಾರರ ಗೋಪ್ಯತೆಯ ಹಕ್ಕಿನ ಅಡಿಯಲ್ಲಿ ಕಂಪನಿಯು ತನ್ನ ಎಂಡ್ ಟು ಎಂಡ್ ಎನ್‌ಕ್ರಿಪ್ಷನ್ ಅನ್ನು ತೆಗೆದುಹಾಕಲು ಸಾಧ್ಯವಿಲ್ಲ. ಯಾವುದೇ ಕಾರಣಕ್ಕೂ ಎಂಡ್ ಟು ಎಂಡ್ ಎನ್‌ಕ್ರಿಪ್ಷನ್ ಅನ್ನು ಕಂಪನಿಯು ಭೇದಿಸುವುದಿಲ್ಲ. ಈ ವಿಚಾರದಲ್ಲಿ ಒತ್ತಡ ಬಂದರೆ ದೇಶವನ್ನೇ ತೊರೆಯುವುದಾಗಿಯೂ ತಿಳಿಸಿದೆ.

ವಾಟ್ಸ್‌ಆ್ಯಪ್‌ನಂತೆಯೇ ಮೆಟಾದ ಫೇಸ್‌ಬುಕ್, ಇನ್‌ಸ್ಟಾಗ್ರಾಂ ಸಹ ಎಂಡ್ ಟು ಎಂಡ್ ಎನ್‌ಕ್ರಿಪ್ಷನ್ ಸೇವೆ ಒದಗಿಸುತ್ತಿದ್ದು, ವಾಟ್ಸ್‌ಆ್ಯಪ್ ಭಾರತೀಯ ಮಾರುಕಟ್ಟೆ ತೊರೆಯುವ ನಿಲುವನ್ನೇ ಫೇಸ್‌ಬುಕ್, ಇನ್‌ಸ್ಟಾಗ್ರಾಂ ತಾಳಬಹುದೇ ಎಂಬುದು ದೊಡ್ಡ ಚರ್ಚೆ ಹುಟ್ಟುಹಾಕಿದೆ. ■

## ಆ್ಯಂಡ್ರಾಯ್ಡ್ 15 ಬಿಡುಗಡೆಗೆ ಸಜ್ಜು




**ಬಹುನಿರೀಕ್ಷಿತ** ‘ಆ್ಯಂಡ್ರಾಯ್ಡ್ 15’ ಕಾರ್ಯಾಚರಣೆ ವ್ಯವಸ್ಥೆ (ಒಎಸ್) ಬಿಡುಗಡೆಗೆ ಸಜ್ಜಾಗುತ್ತಿದ್ದು, ಈಗಾಗಲೇ ಅದರ ‘ಬೆಟಾ’ ಆವೃತ್ತಿಯು ಬಿಡುಗಡೆಗೊಂಡಿದೆ. ಕೆಲ ತಿಂಗಳಲ್ಲಿಯೇ ಪರಿಷ್ಕೃತ ಆವೃತ್ತಿಯನ್ನು ಬಿಡುಗಡೆ ಮಾಡಲು ಗೂಗಲ್ ಸಜ್ಜಾಗುತ್ತಿದೆ.

ಆ್ಯಂಡ್ರಾಯ್ಡ್ ಸ್ಮಾರ್ಟ್‌ಫೋನ್ ಬಳಕೆದಾರರು ಬಹುಕಾಲದಿಂದ ಹೊಸ ಅಪ್‌ಡೇಟ್‌ಗಾಗಿ ಕಾಯುತ್ತಿದ್ದರು. ಅದಕ್ಕೆ ಪೂರಕವಾಗಿ ಗೂಗಲ್ ಆ್ಯಂಡ್ರಾಯ್ಡ್ 15ರ ಬೆಟಾ ಆವೃತ್ತಿಯನ್ನು ಬಿಡುಗಡೆಗೊಳಿಸಿದ್ದು, ಪರಿಷ್ಕೃತ ಆವೃತ್ತಿಯೂ ಬೆಟಾ ಆವೃತ್ತಿಯಂತೆಯೇ ಇರಲಿದೆ. ಬೆಟಾ ಆವೃತ್ತಿಯ ಪ್ರಕಾರ ಆ್ಯಂಡ್ರಾಯ್ಡ್ ಬಳಕೆದಾರರು ತಮ್ಮ ಸ್ಮಾರ್ಟ್‌ಫೋನ್ ಅನ್ನು ಇನ್ನಷ್ಟು ಸರಳವಾಗಿ ಬಳಕೆ ಮಾಡಬಹುದು. ಅಲ್ಲದೆ, ಡಾಟಾ ಸುರಕ್ಷತೆ, ಇಂಟರ್‌ನೆಟ್ ವೇಗ ಸೇರಿದಂತೆ ಇನ್ನೂ ಹಲವು ವಿಚಾರಗಳಲ್ಲಿ ಅಪ್‌ಡೇಟ್ ಆಗಿದೆ.

ಗೂಗಲ್‌ನ ಈ ಆ್ಯಂಡ್ರಾಯ್ಡ್ 15 ಹಲವು ಹೊಸ ಫೀಚರ್‌ಗಳನ್ನು ಹೊಂದಿದ್ದು, ಅದರಲ್ಲಿ ಗೂಗಲ್ ಖಾತೆಗೆ ಎರಡು ಹಂತದ ವೆರಿಫಿಕೇಷನ್ ಫೀಚರ್ ವಿಶೇಷ ಎನ್ನಬಹುದು. ಉತ್ಪಾದಕತೆ, ಗೋಪ್ಯತೆ ಮತ್ತು ಭದ್ರತೆ, ಕಂಟೆಂಟ್ ಕ್ರಿಯೇಟರ್‌ಗಳಿಗೆ ಅನುಕೂಲವಾಗುವ ಫೀಚರ್‌ಗಳು, ಸಂವಹನಕ್ಕೆ, ಕಾರ್ಯಕ್ಷಮತೆ ಮತ್ತು ಗುಣಮಟ್ಟಕ್ಕೆ, ಹೀಗೆ ಹಲವು ಕ್ರಮಗಳಿಗೆ ಅನುಕೂಲವಾಗುವ ಫೀಚರ್‌ಗಳನ್ನು ಇಲ್ಲಿ ಕಾಣಬಹುದು.

ಅಪ್ಲಿಕೇಶನ್‌ಗಳನ್ನು ಆರ್ಕೈವ್ ಮತ್ತು ಅನ್‌ಆರ್ಕೈವ್ ಮಾಡುವ ಅವಕಾಶವೂ ಇದರಲ್ಲಿದೆ. ಇದರಿಂದ ಬಳಕೆದಾರರು ಅತಿ ಸುಲಭವಾಗಿ ಫೋನ್‌ನಲ್ಲಿನ ಶೇಖರಣಾ ಸಾಮರ್ಥ್ಯ ಹೆಚ್ಚಿಸಬಹುದು. ಅಲ್ಲದೆ ಸಂಪರ್ಕ ಸಂಖ್ಯೆಗಳಿಗೆ ಸಹ ಎಂಡ್–ಟು–ಎಂಡ್ ಎನ್‌ಕ್ರಿಪ್ಷನ್, ಇತರೆ ಜನರ ಸಂಪರ್ಕ ಸಂಖ್ಯೆ ಮಾಹಿತಿ ಪರಿಶೀಲಿಸಲು ಸಹ ಇದು ಸಹಾಯ ಮಾಡಲಿದೆ. ■